# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಚಿಕ್ಕಮಗಳೂರು ವಿಭಾಗ:ಚಿಕ್ಕಮಗಳೂರು.

ಸಂ:ಕರಾಸಾ/ಚಿವಿ/ಸಂ/ವಾ/2818 /17-18 ದಿನಾಂಕ:12.01.2018

## ಟೆಂಡರ್ ಪ್ರಕಟಣೆ ಸಂಖ್ಯೆ-1/2018

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಿಕ್ಕಮಗಳೂರು ವಿಭಾಗದ ವ್ಯಾಪ್ತಿಗೆ ಸೇರಿದ ಚಿಕ್ಕಮಗಳೂರು ಘಟಕದಲ್ಲಿ ನಿಗಮದ ಸಿಬ್ಬಂದಿಗಳಿಗೆ ಕಾಫಿ, ಟೀ, ಉಪಹಾರ, ಊಟವನ್ನು ಸಾಧ್ಯವಾದಷ್ಟು ರಿಯಾಯಿತಿ ದರದಲ್ಲಿ ವಿತರಿಸುವ ಸಲುವಾಗಿ "ಚಿಕ್ಕಮಗಳೂರು-ಮೂಡಿಗೆರೆ" ರಸ್ತೆಗೆ ಅಭಿಮುಖವಾಗಿ ನಿರ್ಮಿಸಿರುವ ಉಪಹಾರ ಗೃಹಕ್ಕೆ ಪರವಾನಿಗೆದಾರರನ್ನು ಇ-ಟೆಂಡರ್ ಪ್ರಕ್ರೀಯೆ ಮೂಲಕ ಒಟ್ಟಾರೆ ಕಡಿಮೆ ಮೊತ್ತ ನಮೂದಿಸಿದವರಿಗೆ ಆಯ್ಕೆಮಾಡಲು ಅಸಕ್ತ ವಾಣಿಜ್ಯ ಉದ್ಯಮಿದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ಘಟಕದ ಹೆಸರು | ವಾಣಿಜ್ಯ ಮಳಿಗೆ | ಪರವಾನಿಗೆ ಅವಧಿ | ಪರವಾನಿಗೆ ಶುಲ್ಕ | ಭದ್ರತಾ ಠೇವಣಿ |
|---|---|---|---|---|---|
| 1 | ಚಿಕ್ಕಮಗಳೂರು ಘಟಕ | ಉಪಹಾರ ಗೃಹ (ಖಾಲಿಯಾಗುವ ದಿ:10.07.2018) | 2 ವರ್ಷ | ಉಚಿತ | ರೂ.50,000/- |

ಟೆಂಡರ್‌ದಾರರು ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿರುವ ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ:14.02.2018 ರಂದು 15.00 ಗಂಟೆಯೊಳಗೆ ಅರ್ಜಿ ಸಲ್ಲಿಸುವುದು ಹಾಗೂ ಸದರಿ ಟೆಂಡರ್‌ನ್ನು ಇ-ಪ್ರಕ್ಯೂರ್ ಮೆಂಟ್‌ನಲ್ಲಿನ ಪ್ರಕಾರ ದಿನಾಂಕ:16.02.2018ರಂದು 15.01 ಗಂಟೆಯ ನಂತರ ತೆರೆಯಲಾಗುವುದು.

(ಚಕ್ ಬಂಧಿ ಹಾಗೂ ಹೆಚ್ಚಿನ ವಿವರವನ್ನು ವಿಭಾಗೀಯ ಕಛೇರಿ, ಸಂಚಾರ ಶಾಖೆಯಲ್ಲಿ ಅಥವಾ **www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳುವುದು.**)

**Last date for submitting application: As per e-procurement portal.**
**Online auction on: As per e-procurement portal.**
**Tender will be opened on: As per e-procurement portal.**

ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ:ಚಿಕ್ಕಮಗಳೂರು ವಿಭಾಗ.

**ನಿಬಂಧನೆಗಳು:-**

1. ಉಪಹಾರ ಗೃಹ ಯಾವ ಸ್ಥಿತಿಯಲ್ಲಿವೆಯೋ ಹಾಗೇಯೇ ನೀಡಲಾಗುವುದು.
2. ನಿಗಮದ ಕಾರ್ಮಿಕ ಸಿಬ್ಬಂದಿಗಳಿಗೆ ಸಾಧ್ಯವಾದಷ್ಟು ರಿಯಾಯಿತಿ ದರದಲ್ಲಿ ರುಚಿ-ಶುಚಿಯಾದ ಕಾಫಿ, ಟೀ, ಫಲಹಾರ ಹಾಗೂ ಊಟವನ್ನು ನೀಡುವ ಆಸಕ್ತ ವಾಣಿಜ್ಯ ಉದ್ಯಮಿದಾರರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.
3. ಕಡಿಮೆ ಮೊತ್ತ ನಮೂದಿಸಿದವರಿಗೆ ಆಯ್ಕೆಮಾಡಿಕೊಳ್ಳಲಾಗುವುದು.
4. ಉಪಹಾರ ಗೃಹದ ಕರಾರು ಒಪ್ಪಂದದ ಅವಧಿಯು 2 ವರ್ಷಗಳು ಮಾತ್ರ,
5. ಜಿಲ್ಲಾ ಕೇಂದ್ರ ಸ್ಥಾನದ ಉಪಹಾರ ಗೃಹಕ್ಕೆ ಭದ್ರತಾ ಠೇವಣಿ ರೂ.50,000/-, ಡಿ.ಡಿ. ರೂಪದಲ್ಲಿ **"<u>ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ಚಿಕ್ಕಮಗಳೂರು ವಿಭಾಗ</u>"** (Divisional Controller, K.S.R.T.C, Chikmagalur Division) ಇವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು.
6. ಉಪಹಾರಗೃಹದಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ.
7. ಟೆಂಡರ್ ಅರ್ಜಿಯೊಂದಿಗೆ ಅಡಕಗೊಳಿಸಿರುವ ANNEXURE-A ನಲ್ಲಿ ಉಪಹಾರ ಗೃಹದಲ್ಲಿ/ ನೀಡಲು ಉದ್ದೇಶಿಸಿರುವ ಊಟ, ತಿಂಡಿ, ಕಾಫಿ, ಟೀ ಇತ್ಯಾದಿ ಐಟಂಗಳ ಪ್ರಮಾಣವನ್ನು ದರದೊಂದಿಗೆ ಟೆಂಡರ್‌ನಲ್ಲಿ ಸ್ಪಷ್ಟವಾಗಿ ನಮೂದಿಸುವುದು.
8. ಉಪಹಾರ ಗೃಹಕ್ಕೆ ಘಟಕದ ಆವರಣದಲ್ಲಿರುವ ನೀರಿನ ಲಭ್ಯತೆಗೆ ಅನುಗುಣವಾಗಿ ನೀರನ್ನು ಉಚಿತವಾಗಿ ನೀಡಲಾಗುವುದು, ನೀರಿನ ಸಮಸ್ಯೆ ಉದ್ಭವಿಸಿದಲ್ಲಿ ಗುತ್ತಿಗೆದಾರರು ಅವರ ಸ್ವಂತ ವೆಚ್ಚದಲ್ಲೇ ಹೊರಗಿನಿಂದ ನೀರು ತರಿಸಿಕೊಳ್ಳುವುದು.
9. ಉಪಹಾರ ಗೃಹ ಮಳಿಗೆಗೆ ಉಪಯೋಗಿಸಿಕೊಂಡಿರುವ ವಿದ್ಯುತ್ ಬಿಲ್‌ನ್ನು ಗುತ್ತಿಗೆದಾರರೇ ಪಾವತಿಸುವುದು.
10. ಗುತ್ತಿಗೆದಾರರು ನೀಡುವ ಊಟ, ತಿಂಡಿ, ಕಾಫಿ, ಟೀ ಇತ್ಯಾದಿಗಳ ಗುಣಮಟ್ಟ, ಪ್ರಮಾಣ ಅಥವಾ ಶುಚಿತ್ವದ ವಿಚಾರದಲ್ಲಿ ಯಾವುದೇ ಲೋಪದೋಷ ಕಂಡುಬಂದಲ್ಲಿ ಅಥವಾ ಗುತ್ತಿಗೆದಾರರು ಉಪಹಾರ ಗೃಹವನ್ನು ಸ್ವತ: ನಡೆಸದೇ ಬೇರೆ ಯಾರಿಗಾದರೂ ಪರಭಾರೆ(Sublet) ಮಾಡಿರುವುದು, ಒಳಬಾಡಿಗೆಗೆ ನೀಡಿರುವುದು ಕಂಡು ಬಂದಲ್ಲಿ ಅಥವಾ ಇನ್ನಿತರೆ ಯಾವುದೇ ಅನ್ಯ/ಕಾನೂನು ಬಾಹಿರ ಚಟುವಟಿಕೆಗಳ ಸುಳಿವು/ದೂರುಗಳು ಬಂದಲ್ಲಿ ಒಂದು ವಾರದ ನೋಟಿಸ್ ಜಾರಿ ಮಾಡಿ ಕರಾರು ಒಪ್ಪಂದವನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುವುದು.
11. ಗುತ್ತಿಗೆದಾರರು ನೀಡುವ ಊಟ, ತಿಂಡಿ, ಕಾಫಿ, ಟೀ ಇತ್ಯಾದಿಗಳ ಗುಣಮಟ್ಟ, ಪ್ರಮಾಣ ಮತ್ತು ಗುಣಮಟ್ಟವನ್ನು ಹಾಗೂ ಶುಚಿತ್ವವನ್ನು ತಪ್ಪದೇ ಕಾಯ್ದುಕೊಳ್ಳುವುದು. ತಪ್ಪಿದ್ದಲ್ಲಿ ಈ ಸಂಬಂಧ ನಿಗಮದ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಿ, ಕರಾರು ಒಪ್ಪಂದವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.
12. ಮಳಿಗೆಗಳಲ್ಲಿ ಟೂರಿಸ್ಟ್ ಟ್ರಾವಲ್, ಮದ್ಯಪಾನ, ಮಾಂಸ ಮತ್ತು ಇತರೆ ಕಾನೂನು ಬಾಹಿರ ಚಟುವಟಿಕೆಗಳಿರುವ ವ್ಯಾಪಾರ, ಮಾದಕ ವಸ್ತುಗಳು, ವಾಯು ಮಾಲಿನ್ಯ ಉಂಟುಮಾಡುವ ಹಾಗೂ ಸಂಸ್ಥೆಯ ಹಿತಕ್ಕೆ ಧಕ್ಕೆಯಾಗುವಂತಹ ವ್ಯಾಪಾರಗಳನ್ನು ಹೊರತು ಪಡಿಸಿದೆ.
13. ಉಪಹಾರ ಗೃಹದಲ್ಲಿ ನಿಯೋಜಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆಯನ್ವಯ ಕನಿಷ್ಟ ವೇತನ ನೀಡುವುದು ಹಾಗೂ ಕಾರ್ಮಿಕ ಕಾಯಿದೆನ್ವಯ ಪಿ.ಎಫ್, ಇಎಸ್‌ಐ ಇತರೆ ಸವಲತ್ತುಗಳನ್ನು ನೀಡುವ ಜವಾಬ್ದಾರಿಯನ್ನು ಗುತ್ತಿಗೆದಾರರೇ ನಿರ್ವಹಿಸತಕ್ಕದ್ದು.

14. ಘಟಕದಲ್ಲಿರುವ ಉಪಹಾರ ಗೃಹವು ಮುಖ್ಯ ರಸ್ತೆಗೆ ಹೊಂದಿಕೊಂಡಿರುವುದರಿಂದ ಅಪಘಾತಗಳು, ಇತರೆ ಅನಾಹುತಗಳು ನಡೆಯದಂತೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳುವುದು. ಅನಾಹುತಗಳಿಗೆ ಗುತ್ತಿಗೆದಾರರೇ ಹೊಣೆಗಾರರಾಗಿರುತ್ತಾರೆ.
15. ಘಟಕದ ಉಪಹಾರ ಗೃಹದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇದಿಸಲಾಗಿರುತ್ತದೆ.
16. ಘಟಕದ ಉಪಹಾರ ಗೃಹ ಸಿಗರೇಟು/ಗುಟ್ಕಾ ಮತ್ತು ಇನ್ನಿತರೆ ತಂಬಾಕು ಪದಾರ್ಥಗಳ ಮಾರಾಟವನ್ನು ಕಡ್ಡಾಯವಾಗಿ ನಿಷೇದಿಸಿದೆ.
17. ಉಪಹಾರ ಗೃಹದಲ್ಲಿ LPG ಗ್ಯಾಸ್/ವಿದ್ಯುತ್‌ನ್ನು ಮಾತ್ರ ಬಳಸುವುದು. (ಸೌದೆ/ಹೊಟ್ಟು ಇತ್ಯಾದಿಗಳನ್ನು ಬಳಸಿ ಒಲೆಯನ್ನು ಉರಿಸುವಂತಿಲ್ಲ)
18. ಬೆಂಕಿ ನಂದಿಸುವ ಉಪಕರಣಗಳನ್ನು ಸ್ವಂತ ಖರ್ಚಿನಲ್ಲಿ ಜೋಡಿಸಿಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿರಬೇಕು.
19. ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷೆನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಅಕ್ಟ್ ನಂ:8/2003 ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.
20. ಆಯ್ಕೆಗೊಂಡ ಗುತ್ತಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಭದ್ರತಾ ಠೇವಣಿಯನ್ನು ಹಿಂತಿರುಗಿಸಲಾಗುವುದು.
21. ಕರಾರು ಒಪ್ಪಂದ ಮಾಡಿಕೊಂಡ ಗುತ್ತಿಗೆದಾರರು ಉಪಹಾರ ಗೃಹದ ಮೂಲ ಕಟ್ಟಡಕ್ಕೆ ಹಾನಿಯಾಗದಂತೆ ನೋಡಿಕೊಳ್ಳುವುದು/ಯಾಥಾಸ್ಥಿತಿಯನ್ನು ಕಾಪಾಡುವುದು, ಉಳಿದಂತೆ ಯಾವುದೇ ದುರಸ್ಥಿ ಕಾರ್ಯ, ವಿದ್ಯುತ್‌ಚ್ಛಕ್ತಿ ಬಿಲ್ ಪಾವತಿ ಬಾಕಿ ಅಥವಾ ಇನ್ನಿತರೆ ಯಾವುದೇ ಕಾನೂನು ಬದ್ಧಬಾಕಿ ಇದ್ದಲ್ಲಿ ಭದ್ರತಾ ಠೇವಣಿಯಲ್ಲಿ ಜಮಾಮಾಡಿಕೊಳ್ಳಲಾಗುವುದು.
22. ಗುತ್ತಿಗೆದಾರರು ನಿಗಮಕ್ಕೆ ಯಾವುದೇ ಷರತ್ತುಗಳನ್ನು ಹಾಕುವಂತಿಲ್ಲ, ಸಂಸ್ಥೆಯು ಕಾಲಕಾಲಕ್ಕೆ ವಿಧಿಸುವ ಎಲ್ಲ ಷರತ್ತುಗಳನ್ನು ಒಪ್ಪಿಕೊಳ್ಳತಕ್ಕದಾಗಿರುತ್ತದೆ.
23. ಹೆಚ್ಚುವರಿ ಸ್ಥಳವನ್ನು ತೆರವುಗೊಳಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು ಅಥವಾ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಕರಾರು ಒಪ್ಪಂದವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.
24. ಕಾಮಗಾರಿಗಾಗಿ ಮಳಿಗೆ ಅವಶ್ಯಕತೆ ಇದ್ದಾಗ ನಿಗಮದವತಿಯಿಂದ 1 ತಿಂಗಳು ಮುಂಚಿತವಾಗಿ ನೋಟಿಸ್ ನೀಡಿ ತೆರವುಗೊಳಿಸಲಾಗುವುದು.
25. ಟೆಂಡರ್ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ & ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದರಿಸಿಕೊಂಡಿದೆ.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ:ಚಿಕ್ಕಮಗಳೂರು.